# ರಾಮಕೃಷ್ಣ ಮಿಷನ್ ಆಶ್ರಮ

(ರಾಮಕೃಷ್ಣ ಮಿಷನ್, ಬೇಲೂರು ಮಠ ಅಂಚೆ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ 711202 – ಇದರ ಶಾಖಾ ಕೇಂದ್ರ)
ಪುಟ್ಲಂಪಲ್ಲಿ, RIMS ಆಸ್ಪತ್ರೆಯ ಹತ್ತಿರ, ಕಡಪ – 516002; ಫೋನ್: 08562– 200120, 200633
ಸಿಟಿ ಸೆಂಟರ್: ರಾಮಕೃಷ್ಣ ಮಠ, ಟ್ರಂಕ್ ರೋಡ್, ಕಡಪ – 516001, ಫೋನ್ : 08562– 241633
e-mail : kadapamath@yahoo.com ; Web Site: www.rkm-kadapa.org

## ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ದೇವಮಂದಿರ
## ಒಂದು ವಿನಂತಿ

ದಿವ್ಯತ್ರಯರ ಅನುಗ್ರಹ ಮತ್ತು ಭಕ್ತರು ಹಾಗೂ ಹಿತೈಷಿಗಳ ಹಾರ್ದಿಕ ಸಹಕಾರದೊಂದಿಗೆ, ಕಡಪದಲ್ಲಿರುವ ರಾಮಕೃಷ್ಣ ಮಿಷನ್ ಅತಿ ಶೀಘ್ರಕಾಲದಲ್ಲಿಯೇ ಉತ್ತಮ ಪ್ರಗತಿಯನ್ನು ಸಾಧಿಸಿದೆ (ನೂರು ವರ್ಷಗಳ ಹಿಂದಿನ 'ರಾಮಕೃಷ್ಣ ಸಮಾಜ'ವು ೨೦೦೪ರಲ್ಲಿ ರಾಮಕೃಷ್ಣ ಮಿಷನ್ನಿಗೆ ಅಧಿಕೃತವಾಗಿ ಸೇರ್ಪಡೆಯಾಯಿತು). ಈಗ ಈ ಕೇಂದ್ರವು ಕಡಪ ನಗರದ ಹೊರವಲಯದಲ್ಲಿರುವ ಪುಟ್ಲಂಪಲ್ಲಿಯ RIMS ಆಸ್ಪತ್ರೆಯ ಹತ್ತಿರದ 10 ಎಕರೆ ಪ್ರದೇಶದಲ್ಲಿ ಅನೇಕ ಸೇವಾಕಾರ್ಯಗಳನ್ನು ನಡೆಸುತ್ತಿದೆ. ಇವುಗಳೆಂದರೆ **1. ಶ್ರೀರಾಮಕೃಷ್ಣ ಬಾಲಕಾಶ್ರಮ** ಎಂಬ ಹೆಸರಿನ ಗ್ರಾಮೀಣ ವಿದ್ಯಾರ್ಥಿಗಳಿಗಾಗಿನ ಉಚಿತ ವಸತಿನಿಲಯ (ಸದ್ಯ 30 ಬಾಲಕರು ಇದ್ದಾರೆ). **2. ವಿವೇಕಾನಂದ ವಿದ್ಯಾನಿಕೇತನ** – ಎಲ್.ಕೆ.ಜಿ. ಯಿಂದ ಹಿಡಿದು ಉನ್ನತ ಪ್ರಾಥಮಿಕ ಶಾಲೆಯವರೆಗೆ. **3. ದೊಡ್ಡದಾದ ಸಭಾಂಗಣ:** ಹಲವಾರು ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲು ಇದರಿಂದ ಅನುಕೂಲವಾಗುತ್ತದೆ. **4. ಕಛೇರಿ, ಗ್ರಂಥಾಲಯ, ಪುಸ್ತಕ ಮಳಿಗೆ** – ಇವುಗಳನ್ನು ಒಳಗೊಂಡ ಕಟ್ಟಡ. **5. ವಿದ್ಯಾ** ಎಂಬ ಹೆಸರಿನ ಅಡಿಯಲ್ಲಿ ರಾಯಲಸೀಮಾ ಪ್ರದೇಶದ ಶಾಲೆ ಮತ್ತು ಕಾಲೇಜುಗಳಲ್ಲಿ ಮೌಲ್ಯಶಿಕ್ಷಣ ಕಾರ್ಯಕ್ರಮ. **6. ಸಾಧುನಿವಾಸ** (ತಾತ್ಕಾಲಿಕ ಪ್ರಾರ್ಥನಾ ಮಂದಿರದೊಡನೆ): ಮಾನವನಲ್ಲಿ ಭಗವಂತನನ್ನು ನೋಡುವ ಭಾವನೆಯನ್ನು ಇಟ್ಟುಕೊಂಡು, ನಿಃಸ್ವಾರ್ಥಸೇವೆಯನ್ನು ಸಲ್ಲಿಸುವ ಸಾಧುಗಳ ನಿವಾಸಸ್ಥಾನ ಹಾಗೂ ದೈನಂದಿನ ಆಧ್ಯಾತ್ಮಿಕ ಕಾರ್ಯಕ್ರಮಗಳು ಮತ್ತು ಸೇವಾಕಾರ್ಯಗಳು.

### ಶ್ರೀರಾಮಕೃಷ್ಣರಿಗೆ ಸಮರ್ಪಿತವಾದ ವಿಶ್ವಭಾವೈಕ್ಯ ದೇವಮಂದಿರ



ಮಂದಿರದ ಮಾದರಿ

ಶ್ರೀರಾಮಕೃಷ್ಣರಿಗೆ ಸಮರ್ಪಿತವಾದ ವಿಶ್ವಭಾವೈಕ್ಯ ದೇವಮಂದಿರದ ಶಂಕುಸ್ಥಾಪನೆಯು 2009ರ ಸೆಪ್ಟೆಂಬರ್ ತಿಂಗಳಿನಲ್ಲಿ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರಿಂದ ಜರುಗಿತು. ಕಟ್ಟಡದ ಕಾಮಗಾರಿ ಕೆಲಸವು ಆಗಸ್ಟ್ 2010 ರಂದು ಆರಂಭಗೊಂಡಿತು. ಕಟ್ಟಡದ ನಿರ್ಮಾಣವು ಈಗಾಗಲೇ ಬಹುತೇಕ ಸಂಪೂರ್ಣಗೊಂಡಿದ್ದು, ಗೋಪುರಗಳ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ. ಕಟ್ಟಡದ ಒಳ ಕಾಮಗಾರಿಗಳು ಜುಲೈ 2011 ರಂದು, ಗುರು ಪೂರ್ಣಿಮೆಯ ದಿವಸ ಆರಂಭಗೊಂಡಿದ್ದು, ನಿರಂತರವಾಗಿ ನಡೆಯುತ್ತಲಿವೆ. 1.4 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇದನ್ನು ನಿರ್ಮಿಸಲಾಗುತ್ತಿದೆ. ಇದುವರೆಗೂ ದಾನಿಗಳ ಮೂಲಕ 90 ಲಕ್ಷ ರೂಪಾಯಿಗಳು ಸಂಗ್ರಹವಾಗಿದ್ದು, ದೇವಸ್ಥಾನದ ನಿರ್ಮಾಣವನ್ನು ಸಂಪೂರ್ಣಗೊಳಿಸಲು ಮತ್ತಷ್ಟು ಹಣದ ಆವಶ್ಯಕತೆ ಇದೆ. ನಮ್ಮ ಭಕ್ತರು ಮತ್ತು ಹಿತೈಷಿಗಳು ಈ ಪುಣ್ಯಕಾರ್ಯಕ್ಕಾಗಿ ಉದಾರದಾನ ಮಾಡಿ, ದೇವಮಂದಿರವು ಬೇಗ ಮುಗಿಯುವುದಕ್ಕೆ ಸಹಕಾರ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.



ನಿರ್ಮಾಣ ಕಾರ್ಯ ಪ್ರಗತಿಯಲ್ಲಿ

ಚೆಕ್‌ಗಳು ಮತ್ತು ಡಿ.ಡಿ.ಗಳನ್ನು **Ramakrishna Mission, Kadapa** - ಈ ಹೆಸರಿಗೆ ಬರೆದು ಕಳಿಸಬೇಕಾಗಿ ಕೋರುತ್ತೇವೆ. Cuddapah ಎಂಬ ಹಳೆಯ ಹೆಸರು ಕೂಡ ಚಾಲ್ತಿಯಲ್ಲಿದೆ. ಅಥವಾ ನಿಮ್ಮ ದೇಣಿಗೆಯನ್ನು ನೇರವಾಗಿ ಇ–ಟ್ರಾನ್ಸ್‌ಫರ್ ಮೂಲಕ ನಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆಗೆ ಸಂದಾಯಿಸಬಹುದು. ಅದರ ವಿವರ ಹೀಗಿದೆ: **Ramakrishna Mission A/c No 30186936408 at SBI, RIMS Branch, Cuddapah. Bank code : SBIN 0010107**. ಇ–ಟ್ರಾನ್ಸ್‌ಫರ್ ಮೂಲಕ ಹಣವನ್ನು ಕಳಿಸುವಾಗ ದಯವಿಟ್ಟು, ನಿಮ್ಮ ಹೆಸರು ಮತ್ತು ಪೂರ್ತಿ ವಿಳಾಸವನ್ನು ತಪ್ಪದೆ ನಮಗೆ ಬರೆದು ತಿಳಿಸಿರಿ. ಇದರಿಂದ ಬ್ಯಾಂಕ್ ಖಾತೆಯಲ್ಲಿ ನಿಮ್ಮ ಹಣ ಜಮಾ ಆಗುವುದನ್ನು ಖಾತರಿ ಪಡಿಸಿಕೊಳ್ಳಲು ಮತ್ತು ರಸೀದಿಯನ್ನು ಕಳಿಸಲು ನಮಗೆ ಸುಲಭವಾಗುತ್ತದೆ. 'ರಾಮಕೃಷ್ಣ ಮಿಷನ್'ಗೆ ನೀಡಲಾಗುವ ಎಲ್ಲ ದೇಣಿಗೆಗಳೂ ಆದಾಯಕರದ ನಿಬಂಧನೆಗಳ 80-G ಅಧಿನಿಯಮದ ಪ್ರಕಾರ ತೆರಿಗೆವಿನಾಯತಿಗೆ ಅರ್ಹವಾಗಿವೆ.

ಇಂತಿ ಭಗವತ್ಸೇವೆಯಲ್ಲಿ ತಮ್ಮವ
ಸ್ವಾಮಿ ಆತ್ಮವಿದಾನಂದ
ಅಧ್ಯಕ್ಷರು

## ಸಂಪಾದಕೀಯ

# ಶ್ರೀಮಾತೆಯವರು ಕಂಡ ಶ್ರೀರಾಮಕೃಷ್ಣ

**ಶ್ರೀ**ರಾಮಕೃಷ್ಣರನ್ನು ಶ್ರೀಮಾತೆ ಹೇಗೆ ಕಾಣುತ್ತಿದ್ದರು? ಇದು ಸ್ವಾರಸ್ಯಕರವಾದ ವಿಷಯ. ಏಕೆಂದರೆ, ಶ್ರೀಮಾತೆಗೆ ಶ್ರೀರಾಮಕೃಷ್ಣರು ಪತಿಯೂ ಹೌದು, ಗುರುವೂ ಹೌದು ಮತ್ತು ಇಷ್ಟದೇವತೆಯೂ ಹೌದು. ಇದಲ್ಲದೆ, ಶ್ರೀಮಾತೆಯವರು ತಮ್ಮ ಪತಿದೇವರನ್ನು **'ಪರಬ್ರಹ್ಮಸ್ವರೂಪಿ'** ಎಂದೂ ಅರಿತಿದ್ದರು. ಇಂತಹ ಅರಿವು ಅಥವಾ ಜ್ಞಾನ ಪರೋಕ್ಷವಾದುದಲ್ಲ; ಅನುಭಾವದಿಂದ ಬಂದದ್ದು. ರಾಧೆಯು ಶ್ರೀಕೃಷ್ಣನ ಭಾವದಲ್ಲಿ ಸಂಪೂರ್ಣವಾಗಿ ತಲ್ಲೀನಳಾಗಿದ್ದಳು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಹಾಗೆಯೇ ಶ್ರೀರಾಮಕೃಷ್ಣರ ಭಾವದಲ್ಲಿ ಶ್ರೀಮಾತೆ ತಮ್ಮ ಮನಸ್ಸನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಹಾಗೆಂದೇ ಸ್ವಾಮಿ ಅಭೇದಾನಂದರು ತಮ್ಮ ಧ್ಯಾನಸ್ತೋತ್ರದಲ್ಲಿ, **ತದ್ಭಾವರಂಜಿತಾಕಾರಾಂ –** ಶ್ರೀರಾಮಕೃಷ್ಣರ ಭಾವದಲ್ಲಿಯೇ ರಂಜಿತವಾದ ಮನಸ್ಸುಳ್ಳವರು ಎಂದು ಶ್ರೀಮಾತೆಯವರನ್ನು ಸ್ತುತಿಸುತ್ತಾರೆ.



### ಪತಿಯಾಗಿ ಶ್ರೀರಾಮಕೃಷ್ಣರು

ಶ್ರೀಮಾತೆಯವರು ಒಬ್ಬ ಆದರ್ಶ ಪತ್ನಿ. ಶ್ರೀರಾಮಕೃಷ್ಣರಲ್ಲಿ ಅವರಿಗಿದ್ದ ಪ್ರೀತಿ, ನಿಷ್ಠೆಗಳನ್ನು ಅಳೆಯಲಾಗದು, ಭಾವಿಸಿ ನೋಡಬೇಕು ಅಷ್ಟೇ. ದಕ್ಷಿಣೇಶ್ವರದಲ್ಲಿ ಶ್ರೀಠಾಕೂರರ ಜೊತೆ ಇದ್ದ ದಿನಗಳ ಬಗ್ಗೆ ಶ್ರೀಮಾತೆ ಹೀಗೆ ಹೇಳುತ್ತಾರೆ: "ನಾನು ದಕ್ಷಿಣೇಶ್ವರದ ನಹಬತ್ತಿನಲ್ಲಿ ಇದ್ದುಕೊಂಡು ಠಾಕೂರರ ಸೇವೆ ಮಾಡುತ್ತಿದ್ದೆ. ಆ ಸಣ್ಣ ಕೊಠಡಿಯಲ್ಲಿ ಬಹಳ ಕಷ್ಟದಿಂದ ಇರಬೇಕಾಗಿತ್ತು. ಅದರ ಜೊತೆಗೆ ಅನೇಕ ಸಾಮಗ್ರಿಗಳು ಬೇರೆ ಇದ್ದವು. ಆದರೆ ಅವರ ಸೇವೆಯಲ್ಲಿ ತೊಡಗುವುದೆಂದರೆ ಅದು ಅತೀವ ಸಂತೋಷವನ್ನು ಉಂಟುಮಾಡುತ್ತಿತ್ತು. ತುಂಬು ಹರ್ಷದಿಂದ ಆ ದಿನಗಳು ನನಗೆ ಗೊತ್ತಿಲ್ಲದೆಯೇ ಕಳೆದುಹೋದವು."

**ಶ್ರೀರಾಮಕೃಷ್ಣರು ನೋಡಲು ಹೇಗೆ ಇದ್ದರು?** ಇದರ ಅಧಿಕೃತ ವಿವರಣೆಯು ಶ್ರೀಮಾತೆಯವರಿಂದ ನಮಗೆ ಸಿಗುವುದು: "ಅವರ ಮೈಬಣ್ಣ ಬಂಗಾರದಂತೆ ಇತ್ತು. ಅವರ ತೋಳಿನಲ್ಲಿ ಕಟ್ಟಿದ್ದ ಬಂಗಾರದ ತಾಯಿತದ ಬಣ್ಣ ಮತ್ತು ಅವರ ಮೈಬಣ್ಣ – ಎರಡೂ ಒಂದೇ ಆಗಿತ್ತು. ನಾನು ಅವರ ದೇಹವನ್ನು ಎಣ್ಣೆಯಿಂದ ಒತ್ತುತ್ತಿದ್ದಾಗ ಅವರ ಇಡೀ ದೇಹದಿಂದ ಕಾಂತಿಯೊಂದು ಹೊರಹೊಮ್ಮುತ್ತಿದ್ದುದನ್ನು ನಾನು ನೋಡುತ್ತಿದ್ದೆ... ಅವರು ಸುಮಾರಾಗಿ ದಪ್ಪವಾಗಿದ್ದರು. ಮಥುರಬಾಬು ಅವರಿಗೆ ಒಂದು ಚಿಕ್ಕ ಕಾಲುಮಣೆಯನ್ನು ಕೊಟ್ಟಿದ್ದನು. ಅದು ಸ್ವಲ್ಪ ಅಗಲವಾಗಿಯೇ ಇತ್ತು. ಆದರೆ ಅವರು ಊಟಕ್ಕೆ ಕುಳಿತುಕೊಳ್ಳಲು ಅದು ಸಾಕಾಗುತ್ತಿರಲಿಲ್ಲ."

**ಶ್ರೀರಾಮಕೃಷ್ಣರು ಸಹಜವಾಗಿ ಹೇಗೆ ನಡೆದುಕೊಳ್ಳುತ್ತಿದ್ದರು?** ಇದಕ್ಕೆ ಶ್ರೀಮಾತೆಯವರು ಹೇಳುವುದು ಹೀಗೆ: "ನಾನೆಂದೂ ಅವರು ಚಿಂತೆಯಿಂದ ಕೂಡಿದ್ದನ್ನು ನೋಡಿಲ್ಲ. ಐದು ವರ್ಷದ ಬಾಲಕನೊಡನೆ ಅಥವಾ ವಯಸ್ಸಾದ ಮುದುಕನೊಡನೆ ಕೂಡ ಒಂದೇ ರೀತಿಯ ಹರ್ಷದಿಂದ ಇರುತ್ತಿದ್ದರು. ಅವರೆಂದೂ ಖಿನ್ನರಾಗಿದ್ದನ್ನು ನಾನು ಕಂಡಿಲ್ಲ. ಓ, ಅವು ಎಂತಹ ಆನಂದದ ದಿನಗಳು!" ಶ್ರೀಮಾತೆಯವರು ಇನ್ನೊಂದೆಡೆ ಹೇಳುತ್ತಾರೆ, "ನಾವು ಆಗ ಎಷ್ಟೊಂದು ಆನಂದದಿಂದ ಇದ್ದೆವು! ಬೇರೆ ಬೇರೆ ಸ್ವಭಾವಗಳ ಅದೆಷ್ಟು ಜನರು ಅವರನ್ನು ನೋಡಲು ಬರುತ್ತಿದ್ದರು! ಆ ಸಮಯದಲ್ಲಿ ದಕ್ಷಿಣೇಶ್ವರವು ಆನಂದದ ಸಂತೆಯಂತೆ ತೋರಿಬರುತ್ತಿತ್ತು." ಹಾಗೆಯೇ ಶ್ರೀರಾಮಕೃಷ್ಣರ ಮುಖದಲ್ಲಿ ಯಾವಾಗಲೂ ನಗು ನಲಿದಾಡುತ್ತಿತ್ತು ಎಂದೂ ಶ್ರೀಮಾತೆ ನೆನಪಿಸಿಕೊಳ್ಳುತ್ತಾರೆ.

**ತಮ್ಮ ಪತ್ನಿಯೊಡನೆ ಶ್ರೀರಾಮಕೃಷ್ಣರು ವ್ಯವಹರಿಸುತ್ತಿದ್ದುದು ಹೇಗೆ?** ಈ ವಿಷಯ ಬಂದಾಗಲೆಲ್ಲ ಶ್ರೀಮಾತೆಯವರಿಂದ ಆನಂದದ, ಆರಾಧನೆಯ ಮಾತುಗಳೇ ಹೊರಹೊಮ್ಮುತ್ತವೆ: "ಆಹಾ! ಠಾಕೂರರು ನನ್ನನ್ನು ಎಷ್ಟು ಚೆನ್ನಾಗಿ ನೋಡಿಕೊಂಡರು! ನನ್ನ ಭಾವನೆಗಳಿಗೆ ಗಾಸಿಯಾಗುವಂತಹ ಒಂದೇ ಒಂದು ಮಾತನ್ನೂ ಅವರು ಎಂದೂ ಆಡಲಿಲ್ಲ... ನಾನು ಆಗ (ದಕ್ಷಿಣೇಶ್ವರದಲ್ಲಿದ್ದಾಗ) ಆನಂದದ ಕುಂಭವೊಂದು ನನ್ನ ಹೃದಯಲ್ಲಿ ಇದ್ದಂತೆ ಭಾವಿಸುತ್ತಿದ್ದೆ. ಅವರೊಡನೆ ಇರುವಾಗಲೆಲ್ಲ ನನ್ನದು ಅದೇ ಅನುಭವ. ಈ ಅನುಭವದ ಭಾವವನ್ನು ಬೇರೆಯವರೊಡನೆ ಹಂಚಿಕೊಳ್ಳುವುದು ಬಹಳ ಕಷ್ಟ."

**ಶ್ರೀರಾಮಕೃಷ್ಣರನ್ನು ಒಬ್ಬ ವಿಶಿಷ್ಟವ್ಯಕ್ತಿಯನ್ನಾಗಿ ಶ್ರೀಮಾತೆಯವರು ಕಾಣುತ್ತಾರೆ.** ಈ ಬಗ್ಗೆ ಅವರ ಮಾತು ಇದು: "ಎಷ್ಟು ಜನರ ಮನಸ್ಸುಗಳನ್ನು ಅವರು ಬೆಳಗಿದ್ದಾರೆ! ಎಂತಹ ನಿರಂತರವಾದ ಆನಂದವನ್ನು ಅವರು ಹೊರಸೂಸುತ್ತಿದ್ದರು! ಹಗಲೂರಾತ್ರಿ ಅವರ ಕೊಠಡಿಯು ನಗು, ಕಥೆಗಳು, ಮಾತುಕತೆ ಮತ್ತು ಸಂಗೀತಗಳಿಂದ ಪ್ರತಿಧ್ವನಿಸುತ್ತಿತ್ತು."

## ಗುರುವಾಗಿ ಶ್ರೀರಾಮಕೃಷ್ಣರು

**ಶ್ರೀರಾಮಕೃಷ್ಣರ ಬೋಧನೆಗಳ ಉದ್ದೇಶವೇನು?** ಶ್ರೀಮಾತೆಯವರು ಆದರ್ಶ ಶಿಷ್ಯೆಯೂ ಹೌದು. ಹಾಗೆಂದೇ ಗುರುದೇವರೂ ಆಗಿದ್ದ ತಮ್ಮ ಪತಿದೇವರಲ್ಲಿ ಅವರಿಗೆ ಇದ್ದ ಶ್ರದ್ಧಾಗೌರವಗಳು ಅಪಾರವಾದುವು. ಶ್ರೀಮಾತೆ ಶ್ರೀರಾಮಕೃಷ್ಣರ ಬೋಧನೆಗಳ ಮಹತ್ವದ ಬಗ್ಗೆ ಹೇಳುವ ಕೆಲವು ಮಾತುಗಳು ಮನೋಜ್ಞವಾದುವು: "ಶ್ರೀರಾಮಕೃಷ್ಣರು ಮಾಡುತ್ತಿದ್ದುದೆಲ್ಲಾ ಭಗವಂತನಿಗಾಗಿಯೇ... ಅವರು ಹೇಳಿರುವ ಮಾತುಗಳ ಉದ್ದೇಶವೂ ಅದೇ ಆಗಿತ್ತು." ಶ್ರೀರಾಮಕೃಷ್ಣರು ಎಲ್ಲವನ್ನೂ ನೇರ ವಾಗಿ ಕಂಡಿದ್ದವರು. ಅವರಿಗೆ ಎಲ್ಲವೂ ತಿಳಿದಿತ್ತು. ಹೀಗಾಗಿ ಅವರ ಮಾತುಗಳು ವೇದಕ್ಕೆ ಸಮಾನ – ಇದು ಶ್ರೀಮಾತೆಯವರ ಅಭಿಪ್ರಾಯ. "ಶ್ರೀರಾಮಕೃಷ್ಣರ ಮಾತುಗಳು ಎಷ್ಟು ಅದ್ಭುತ! ಅವರ ಮಾತುಗಳಿಂದ ಎಷ್ಟೊಂದು ಜನ ಉದ್ಧಾರವಾಗು ತ್ತಿದ್ದಾರೆ! ಅವರು ಎಷ್ಟೋ ಸಲ ನನಗೆ ತುಂಬ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದರು. ನನಗೆ ಬರೆಯುವುದಕ್ಕೆ ಬಂದಿದ್ದರೆ ನಾನು ಅವುಗಳನ್ನು ಬರೆದಿಡುತ್ತಿದ್ದೆ" ಎನ್ನುತ್ತಾರೆ ಶ್ರೀಮಾತೆ.

**ಶ್ರೀರಾಮಕೃಷ್ಣ ವಚನವೇದದ ಮಹತ್ವವೇನು?** 'ಶ್ರೀರಾಮಕೃಷ್ಣ ವಚನವೇದ'ವನ್ನು ಶ್ರೀಮಾತೆಯವರು ಮುಕ್ತಕಂಠದಿಂದ ಕೊಂಡಾಡುತ್ತಾರೆ. ಭಕ್ತರೊಬ್ಬರು ಉಪದೇಶ ಮಾಡಿ ಎಂದು ಕೇಳಿಕೊಂಡಾಗ ಅವರು ಹೇಳುತ್ತಾರೆ, "ನನಗೇನೂ ಗೊತ್ತಿಲ್ಲ. ಶ್ರೀರಾಮಕೃಷ್ಣರಿಂದ ನಾನು ಏನನ್ನು ಕೇಳಿದ್ದೆನೋ ಅದನ್ನೇ ಹೇಳುತ್ತಿದ್ದೇನೆ, ಅಷ್ಟೆ. 'ಶ್ರೀರಾಮಕೃಷ್ಣ ವಚನವೇದ' ವನ್ನು ಓದು. ಆಗ ನಿನಗೆ ಬೇಕಾದ್ದೆಲ್ಲ ತಿಳಿಯುತ್ತದೆ." ಶ್ರೀಮಾತೆಯವರ ಅಭಿಪ್ರಾಯದಲ್ಲಿ ಮಾಸ್ಟರ್ ಮಹಾಶಯ ತನ್ನ 'ವಚನವೇದ'ದಲ್ಲಿ ಶ್ರೀರಾಮಕೃಷ್ಣರ ಮಾತುಗಳನ್ನು ಹಾಗೆಯೇ ಬರೆದಿಟ್ಟಿದ್ದಾನೆ. "ಅವರ ಮಾತುಗಳು ಎಷ್ಟು ಸಿಹಿ" ಎಂದು ಕೂಡ ಶ್ರೀಮಾತೆ ಉದ್ಗರಿಸುತ್ತಾರೆ.

**ಶ್ರೀರಾಮಕೃಷ್ಣರ ಕೃಪೆ ಅವರ ಉಪದೇಶದ ಮೂಲಕ ಹರಿದುಬಂದಿದೆ.** ಹಾಗೆಂದೇ ಶ್ರೀಗುರುಮಹಾರಾಜರಲ್ಲಿ ಶ್ರದ್ಧೆಯಿಟ್ಟು ಬಾಳನ್ನು ನಡೆಸಿ ಎಂದು ಶ್ರೀಮಾತೆ ತಮ್ಮ ಭಕ್ತರಿಗೆ ಹೇಳುತ್ತಿದ್ದರು. ಅವರು ಹೀಗೆ ಕಿವಿಮಾತು ಹೇಳುತ್ತಾರೆ: "ಶ್ರೀರಾಮಕೃಷ್ಣರಲ್ಲಿ ಶ್ರದ್ಧೆಯಿಡು. ಅವರ ಉಪದೇಶದಲ್ಲಿ ಒಂದಿಷ್ಟನ್ನಾದರೂ ಆಚರಿಸು. ನಿನಗೆ ಅವರ ಕೃಪೆ ಸಿಗುವುದರಲ್ಲಿ ಸಂಶಯವಿಲ್ಲೆಂದು ನಾನು ಭರವಸೆ ಕೊಡುತ್ತೇನೆ." ಶ್ರೀಮಾತೆಯ ಪ್ರಕಾರ, ಜ್ಞಾನಮಾರ್ಗ ಬಹಳ ಕಷ್ಟ; ಆದರೆ ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿಕೊಂಡರೆ ಅವರು ಸಕಾಲದಲ್ಲಿ ಬ್ರಹ್ಮಜ್ಞಾನವನ್ನು ಕರುಣಿಸುತ್ತಾರೆ.

## ಅವತಾರಪುರುಷರಾಗಿ ಶ್ರೀರಾಮಕೃಷ್ಣರು

**ಶ್ರೀರಾಮಕೃಷ್ಣರು ನಿಜವಾಗಿ ಯಾರು?** ಶ್ರೀರಾಮಕೃಷ್ಣರು ಜನರ ಕಷ್ಟಗಳನ್ನು ಹೋಗಲಾಡಿಸಲು ಮನುಷ್ಯರೂಪವನ್ನು ಧರಿಸಿಬಂದ ದೇವರೇ ಆಗಿದ್ದಾರೆ ಎಂದು ಶ್ರೀಮಾತೆ ಅಭಿಪ್ರಾಯಪಡುತ್ತಾರೆ. ರಾಜನು ಮಾರುವೇಷದಲ್ಲಿ ನಗರಸಂಚಾರ ಮಾಡುವಂತೆ ಅವರು ಈ ಲೋಕದಲ್ಲಿ ಓಡಾಡಿಕೊಂಡಿದ್ದರು. ಜನ ಅವರನ್ನು ಗುರುತಿಸಿದ ಕೂಡಲೇ ಅವರು ಜಗತ್ತನ್ನು ಬಿಟ್ಟು ಹೊರಟುಹೋದರು ಎಂದು ಶ್ರೀಮಾತೆ ಹೇಳುತ್ತಾರೆ.

**ಅವತಾರ ಯಾವಾಗ ಉಂಟಾಗುತ್ತದೆ?** ಭಗವದ್ಗೀತೆಯಲ್ಲಿ ಅವತಾರದ ಕಾಲವನ್ನು ಕುರಿತು ಶ್ರೀಕೃಷ್ಣ ಹೇಳುತ್ತಾನೆ. ಶ್ರೀಮಾತೆಯವರು ತಮ್ಮದೇ ಆದ ವಿಶಿಷ್ಟಶೈಲಿಯಲ್ಲಿ ಅದನ್ನು ಹೀಗೆ ಹೇಳುತ್ತಾರೆ: "ದೇವರನ್ನು ಮರೆತುಬಿಡುವುದು ಮನುಷ್ಯನಿಗೆ ತುಂಬ ಸಹಜ. ಆದ್ದರಿಂದಲೇ ಅಗತ್ಯಬಿದ್ದಾಗಲೆಲ್ಲ ದೇವರು ಮನುಷ್ಯನಾಗಿ ಹುಟ್ಟಿ ತಾನೇ ಸಾಧನೆ ಮಾಡಿ ತೋರಿಸುತ್ತಾನೆ."

**ಶ್ರೀರಾಮಕೃಷ್ಣಾವತಾರದ ಆದರ್ಶವೇನು?** ಪ್ರತಿಯೊಬ್ಬ ಅವತಾರಪುರುಷನೂ ಒಂದು ನಿರ್ದಿಷ್ಟ ಆದರ್ಶವನ್ನು ತೋರಿಸಿ ಕೊಡುತ್ತಾನೆ. ಈ ಸಲ ತ್ಯಾಗದ ಆದರ್ಶವನ್ನು ಜನರ ಮುಂದೆ ಇಟ್ಟಿದ್ದಾನೆ ಎಂಬುದು ಶ್ರೀಮಾತೆಯವರ ನಿಲುವು. ಶ್ರೀರಾಮಕೃಷ್ಣರಲ್ಲಿ ಮೇಲೆ ಹೇಳಿಕೊಳ್ಳುವ ಯಾವ ಭೂಷಣವೂ ಇರಲಿಲ್ಲ. ಆದರೆ ಶ್ರೀಮಾತೆ ಹೇಳುವಂತೆ ವೈರಾಗ್ಯವೇ ಅವರ ಆಭರಣವಾಗಿತ್ತು. ಈ ಯುಗಕ್ಕೆ ಅವರ ವಿಶೇಷ ಸಂದೇಶವೇ ತ್ಯಾಗ ಎನ್ನುವುದು. ಅಷ್ಟು ಸಹಜವಾದ ತ್ಯಾಗವನ್ನು ಹಿಂದೆ ಯಾರಾದರೂ ಕಂಡಿದ್ದರೇ ಎಂದು ಪ್ರಶ್ನಿಸುತ್ತಾರೆ ಶ್ರೀಮಾತೆ.

**ಶ್ರೀರಾಮಕೃಷ್ಣರು ಬೇರೆ ಬೇರೆ ಧರ್ಮಗಳ ಸಾಧನೆ ಮಾಡಿದುದು ಏತಕ್ಕಾಗಿ?** ಈ ಪ್ರಶ್ನೆಗೆ ಶ್ರೀಮಾತೆ ನೀಡುವ ಉತ್ತರ ಅರ್ಥಗರ್ಭಿತವಾದುದು. ಎಲ್ಲ ಧರ್ಮಗಳೂ ಒಂದೇ ಎಂಬುದನ್ನು ತೋರಿಸುವ ಉದ್ದೇಶದಿಂದಲೇ ಬೇರೆ ಬೇರೆ ಧರ್ಮಗಳ ಪ್ರಕಾರ ಸಾಧನೆಯನ್ನು ಮಾಡಿದರೆಂದು ತಮಗೆ ಎಂದೂ ಅನಿಸಿಲ್ಲ ಎಂದು ಬಿಚ್ಚುಮನಸ್ಸಿನಿಂದ ಶ್ರೀಮಾತೆ ಹೇಳುತ್ತಾರೆ. ಅವರು ಯಾವಾಗಲೂ ಭಗವಂತನ ಆನಂದದಲ್ಲಿ ಮುಳುಗಿರುತ್ತಿದ್ದರು. ಕ್ರೈಸ್ತರು, ಮುಸಲ್ಮಾನರು, ವೈಷ್ಣವರು ಮೊದಲಾದವರ ರೀತಿಯಲ್ಲಿ ಸಾಧನೆ ಮಾಡುವುದರ ಮೂಲಕ, ಬೇರೆ ಬೇರೆ ಬಗೆಯಲ್ಲಿ ಅವರು ಭಗವಂತನ ಲೀಲೆಯನ್ನು ಸವಿದರು ಎಂದು ಶ್ರೀಮಾತೆ ಅಭಿಪ್ರಾಯಪಡುತ್ತಾರೆ.

**ಶ್ರೀರಾಮಕೃಷ್ಣರ ಅವತಾರದ ಉದ್ದೇಶವೇನು?** ಶ್ರೀಮಂತ–ಬಡವ, ವಿದ್ಯಾವಂತ–ಅವಿದ್ಯಾವಂತ ಎಲ್ಲರಿಗೂ ಮುಕ್ತಿಯನ್ನು

ಕೊಡಲು ಶ್ರೀರಾಮಕೃಷ್ಣರು ಜಗತ್ತಿಗೆ ಬಂದಿದ್ದಾರೆ. ಅವರ ಕೃಪೆಯ ಮಲಯಮಾರುತ ಯಾವಾಗಲೂ ಬೀಸುತ್ತಲೇ ಇರುತ್ತದೆ. ತಮ್ಮ ದೋಣಿಯ ಹಾಯಿಪಟವನ್ನು ಬಿಚ್ಚಿ ಶ್ರೀರಾಮಕೃಷ್ಣರಲ್ಲಿ ಶರಣಾಗುವವರು ಧನ್ಯರೇ ಸರಿ.

### ಕರುಣಾಸಾಗರರಾಗಿ ಶ್ರೀರಾಮಕೃಷ್ಣರು

**ಶರಣಾಗತಿಯ ಉಪಾಯ:** "ಶ್ರೀರಾಮಕೃಷ್ಣರಲ್ಲಿ ಶರಣಾಗಿ" ಎಂದು ಶ್ರೀಮಾತೆ ತಮ್ಮ ಭಕ್ತರಿಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಯಾರು ಶ್ರೀರಾಮಕೃಷ್ಣರಲ್ಲಿ ಶರಣಾಗುತ್ತಾರೋ ಅವರು ಎಲ್ಲವನ್ನೂ ಪಡೆಯುತ್ತಾರೆ ಎಂಬುದು ಅವರ ನಿಲುವು. ಅವರೇ ಇನ್ನೊಂದೆಡೆ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರಲ್ಲಿ ಶರಣಾದವರನ್ನು ಯಾವ ಶಾಪವೂ ಏನೂ ಮಾಡಲು ಸಾಧ್ಯವಿಲ್ಲ, ಏನೂ ಹೆದರಬೇಡ."

**ಪ್ರಾರ್ಥನೆಯ ಮಾಧ್ಯಮ:** ಶ್ರೀರಾಮಕೃಷ್ಣರಲ್ಲಿ ಪ್ರಾಮಾಣಿಕ ಭಾವದಿಂದ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಶ್ರೀಮಾತೆ ತುಂಬ ಮಹತ್ವ ನೀಡುತ್ತಿದ್ದರು. "ನಿನ್ನ ಚಿಂತೆಯ ಭಾರದ ಹೊರೆಯನ್ನೆಲ್ಲಾ ಶ್ರೀರಾಮಕೃಷ್ಣರ ಮುಂದಿಡು. ನಿನ್ನ ದುಃಖವನ್ನೆಲ್ಲಾ ಅವರ ಬಳಿ ತೋಡಿಕೋ. ಆಗ ಅವರ ಕೃಪೆಯಿಂದ ನಿನ್ನ ಇಷ್ಟಾರ್ಥಗಳೆಲ್ಲ ಕೈಗೂಡುವುದನ್ನು ನೀನೇ ನೋಡುವೆ" ಎಂದು ಅವರು ಕಿವಿಮಾತು ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಸಿದ್ಧಪುರುಷರು; ಅಂತಹವರ ಮುಂದೆ ಹೇಳಿಕೊಳ್ಳುವುದರಿಂದ ಖಂಡಿತವಾಗಿ ಪಾಪಗಳಿಂದ ಪಾರಾಗಬಹುದು ಎಂದು ಶ್ರೀಮಾತೆ ಬೋಧಿಸುತ್ತಾರೆ. "ಶ್ರೀರಾಮಕೃಷ್ಣರನ್ನು ಪ್ರಾರ್ಥಿಸು. ಅವರು ನಿನಗಾಗಿ ಎಲ್ಲವನ್ನೂ ಮಾಡುತ್ತಾರೆ. ಹೇಗೆ 'ಚಂದಮಾಮ' ಎಲ್ಲ ಮಕ್ಕಳ ಮಾಮನೋ ಹಾಗೆಯೇ ಅವರು ನಿನ್ನವರೇ" ಎಂದು ವಿವರಿಸುತ್ತಾರೆ.

**ನಿತ್ಯರಕ್ಷಕ ಶ್ರೀರಾಮಕೃಷ್ಣ:** ಸಂಸಾರವೆಂದರೆ ಅದು ಭಯ ಹತಾಶೆಗಳ ಕೂಪ. ಇಂತಹ ಭಯದಿಂದ ಪಾರಾಗಲು ಶ್ರೀರಾಮಕೃಷ್ಣರ ಮೊರೆಹೋಗಬೇಕು ಎಂದು ಶ್ರೀಮಾತೆ ಭಕ್ತರಿಗೆ ಹೇಳುತ್ತಿದ್ದರು. "ಶ್ರೀರಾಮಕೃಷ್ಣರೇ ನಮಗೆ ಆಧಾರ; ಅವರೇ ನಮಗೆ ಆದರ್ಶ. ಎಂತಹ ಪರಿಸ್ಥಿತಿಯಲ್ಲಿಯೂ ಅವರನ್ನು ಬಲವಾಗಿ ಹಿಡಿದುಕೋ. ನೀನೆಂದೂ ತಪ್ಪು ಹೆಜ್ಜೆ ಇಡುವುದಿಲ್ಲ" ಎಂದು ಶ್ರೀಮಾತೆ ಭಕ್ತರಿಗೆ ಕರೆನೀಡುತ್ತಾರೆ. ಶ್ರೀರಾಮಕೃಷ್ಣರೊಬ್ಬರೇ ನಮ್ಮನ್ನು ಕಾಪಾಡುವವರೆಂದು ನೆನಪಿಡು. ನೀನಿದನ್ನು ಮರೆತರೆ ದಾರಿ ತಪ್ಪುತ್ತೀಯ ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ. "ಶ್ರೀರಾಮಕೃಷ್ಣರು ಅವತಾರವೆತ್ತಿದ್ದೇ ತಮ್ಮ ಪಾದಗಳಲ್ಲಿ ಶರಣಾಗಿ ಬಂದವರನ್ನು ರಕ್ಷಣೆ ಮಾಡುವುದಕ್ಕೆ; ಹಾಗೆ ಮಾಡದೆ ಇದ್ದರೆ ಅವರು ದೊಡ್ಡ ಪಾಪ ಮಾಡಿದ ಹಾಗಾಗುತ್ತದೆ. ಶ್ರೀರಾಮಕೃಷ್ಣರು ನಿನ್ನನ್ನು ರಕ್ಷಿಸುತ್ತಾರೆ. ನೀನು ಅವರಲ್ಲಿ ಶರಣಾಗಿ ನಿನ್ನ ಪಾಡಿಗೆ ನೀನು ಜೀವನ ನಡೆಸುತ್ತಿರು. ಅವರು ಬೇಕಾದರೆ ನಿನ್ನನ್ನು ಮೇಲೆತ್ತಲಿ ಅಥವಾ ಮುಳುಗಿಸಲಿ. ಆದರೆ ನೀನು ಮಾತ್ರ ಒಳ್ಳೆಯ ದಾರಿಯಲ್ಲಿ ನಡೆಯಬೇಕು" ಎಂದು ಭಕ್ತರೊಬ್ಬರಿಗೆ ಶ್ರೀಮಾತೆ ಸಾಂತ್ವನ ಹೇಳುತ್ತಾರೆ.

### ಪರಬ್ರಹ್ಮಸ್ವರೂಪ ಶ್ರೀರಾಮಕೃಷ್ಣರು

**ಪೂರ್ಣ ಬ್ರಹ್ಮಸ್ವರೂಪ:** ಶ್ರೀರಾಮಕೃಷ್ಣರನ್ನು 'ಅವತಾರಪುರುಷ' ಎಂದು ಆರಾಧಿಸಿದ ಶ್ರೀಮಾತೆಯವರು ಅದಕ್ಕೂ ಮುಂದೆ ಹೋಗಿ, ಅವರಲ್ಲಿ ಸಾಕ್ಷಾತ್ ಪರತತ್ತ್ವದ ಆವಿರ್ಭಾವವನ್ನೇ ನೋಡುತ್ತಾರೆ. ಈ ಭಾವನೆಗಳನ್ನು ತಮ್ಮ ಮಾತುಕತೆಗಳಲ್ಲಿ ಹಲವಾರು ಬಾರಿ ಅವರು ವ್ಯಕ್ತಪಡಿಸಿದ್ದಾರೆ ಕೂಡ. ಒಬ್ಬ ಭಕ್ತರಿಗೆ ಅವರು ಹೇಳುವ ಈ ಮಾತುಗಳಿಂದ ಅದು ಸ್ಪಷ್ಟವಾಗುತ್ತದೆ: "ಮಗು, ಶ್ರೀರಾಮಕೃಷ್ಣರು ಕೇವಲ ಅಂಶವಲ್ಲ, ಪೂರ್ಣ. ಬ್ರಹ್ಮವಲ್ಲದೆ ಈ ಜಗತ್ತಿನಲ್ಲಿ ಬೇರೇನಿದೆ? ನಮ್ಮ ಕಣ್ಣಿಗೆ ಕಾಣುವುದೆಲ್ಲವೂ ಬ್ರಹ್ಮವೇ. ಎಲ್ಲ ದೇವದೇವಿಯರಲ್ಲೂ ಇರುವುದು ಪರಬ್ರಹ್ಮದ ಶಕ್ತಿಯೇ. ಅದೇ ಪುರುಷ, ಅದೇ ಪ್ರಕೃತಿ."

**ಶ್ರೀರಾಮಕೃಷ್ಣರು ಸರ್ವದೇವದೇವೀ ಸ್ವರೂಪರು:** ಈ ಅಂಶವನ್ನು ಶ್ರೀಮಾತೆ ದೃಢವಾಗಿ ಹೀಗೆ ಒತ್ತಿ ಹೇಳುತ್ತಾರೆ: "ಮಹೇಶ್ವರನೂ ಅವರೇ; ಮಹೇಶ್ವರಿಯೂ ಅವರೇ. ಅವರು ಎಲ್ಲ ಮಂತ್ರಗಳ, ಎಲ್ಲ ದೇವದೇವಿಯರ ಸ್ವರೂಪ. ಅವರು ಎಲ್ಲ ಜೀವಿಗಳಲ್ಲೂ ಇದ್ದಾರೆ. ಅವರ ಮೂಲಕ ಎಲ್ಲ ದೇವದೇವಿಯರನ್ನೂ ಪೂಜಿಸಬಹುದು." ಇದು ಶ್ರೀಮಾತೆಯವರು ಒಬ್ಬ ಭಕ್ತನಿಗೆ ನೀಡುವ ಉಪದೇಶ. ಅದಕ್ಕೆ ಕಾರಣ, ಒಬ್ಬ ವ್ಯಕ್ತಿಯ ಇಷ್ಟದೇವತೆ ಮತ್ತು ಶ್ರೀರಾಮಕೃಷ್ಣರು –ಇಬ್ಬರೂ ಒಂದೇ; ಅವರು ಎಲ್ಲ ದೇವದೇವತೆಗಳನ್ನೂ ಪ್ರತಿನಿಧಿಸುತ್ತಾರೆ.

### ಸಾಧನೆಯ ಮಾರ್ಗ

**ಶ್ರೀರಾಮಕೃಷ್ಣರೇ ಕೇಂದ್ರಬಿಂದು:** ಶ್ರೀರಾಮಕೃಷ್ಣರನ್ನೇ ಕೇಂದ್ರವಾಗಿಟ್ಟುಕೊಂಡು ಆಧ್ಯಾತ್ಮಿಕ ಸಾಧನೆಯನ್ನು ಮಾಡಬೇಕು ಎಂದು ಶ್ರೀಮಾತೆ ಉಪದೇಶಿಸುತ್ತಾರೆ. "ಶ್ರೀರಾಮಕೃಷ್ಣರನ್ನು ಪ್ರಾರ್ಥಿಸುವುದು, ಅವರ ನಾಮಸ್ಮರಣೆ, ಅವರ ಚಿಂತನೆ ಮಾಡುವುದು – ಇಷ್ಟಲ್ಲದೆ ಸಾಧನೆ ಅಂದರೆ ಇನ್ನೇನು? ಗುರು, ಇಷ್ಟ ಎಲ್ಲವೂ ಶ್ರೀರಾಮಕೃಷ್ಣರೇ, ಅವರೇ ಸರ್ವಸ್ವ. ಅವರ ಧ್ಯಾನ ಮಾಡಿ, ಪ್ರಾರ್ಥಿಸಬೇಕು " ಎಂದು ಸಾಧನೆಯ ಮರ್ಮವನ್ನು ತಿಳಿಸಿಕೊಡುತ್ತಾರೆ.

**ಶ್ರೀರಾಮಕೃಷ್ಣರ ಪೂಜೆ:** ಶ್ರೀರಾಮಕೃಷ್ಣರ ಚಿತ್ರ ಎಲ್ಲಿರುವುದೋ ಅದೇ ದೇವರ ಮನೆ. ಅವರ ಚಿತ್ರದ ಮುಂದೆ